# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/613/2022/ಎಆರ್‌ಇ-20

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:24-08-2022

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3) ಅನ್ವಯ ವರದಿ**

ವಿಷಯ: ಶ್ರೀ ಗಂಗರಂಗಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹೊನ್ನಾವರ ಗ್ರಾಮ ಪಂಚಾಯಿತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, (ಎದುರುದಾರರು) ದುರ್ನಡತೆ/ಕರ್ತವ್ಯ ಲೋಪದ ಕುರಿತು.

#####

ಶ್ರೀ ಶಿವಕುಮಾರ್.ಎಸ್.ಹೆಚ್., ಬಿನ್ ಲೇಟ್ ಹೊಸಳಯ್ಯ, ಶ್ಯಾಕಲದೇವಪುರ ಗ್ರಾಮ ಮತ್ತು ಅಂಚೆ, ಮಧುರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಎದುರುದಾರರಾದ ಶ್ರೀ ಗಂಗರಂಗಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹೊನ್ನಾವರ ಗ್ರಾಮ ಪಂಚಾಯಿತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

## 2. ದೂರಿನ ಸಂಕ್ಷಿಪ್ತ ವಿವರಣೆ:

ದೂರುದಾರರಾದ ಶ್ರೀ ಶಿವಕುಮಾರ್.ಎಸ್.ಎಚ್. ಬಿನ್ ಲೇಟ್ ಹೊಸಳಯ್ಯ, ಮಧುರ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಗಂಗರಂಗಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹೊನ್ನಾವರ ಗ್ರಾಮ ಪಂಚಾಯಿತಿ, ದೊಡ್ಡಬಳ್ಳಾಪುರ ತಾಲ್ಲೂಕು ಇವರ ವಿರುದ್ಧ ಘನ ಲೋಕಾಯುಕ್ತ ಸಂಸ್ಥೆಯಲ್ಲಿ ದೂರು ದಾಖಲಿಸಿದ್ದು ಸದರಿ ದೂರಿನಲ್ಲಿ ಮಧುರೆ ಹೋಬಳಿಯ ಶ್ಯಾಕುಲದೇವನಪುರ ಗ್ರಾಮದ ಗ್ರಾಮ ಠಾಣಕ್ಕೆ ಸೇರಿದ ಸ್ವತ್ತಿನ ಖಾತೆ ಸಂಖ್ಯೆ.203ರಲ್ಲಿ 37 * 22 ಅಡಿಗಳ ಖಾಲಿ ನಿವೇಶನವನ್ನು ದೂರುದಾರರ ತಾಯಿಯವರ ಹೆಸರಿನಲ್ಲಿದ್ದು ಸದರಿ ನಿವೇಶನವನ್ನು ದೂರುದಾರರ ಹೆಸರಿಗೆ ಬರೆದುಕೊಟ್ಟಿರುವ ನೊಂದಣಿ ದಾನಪತ್ರದ ಜೊತೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳೊಂದಿಗೆ ದಿನಾಂಕ:18-9-2020ರಂದು ಹೊನ್ನಾವರ ಗ್ರಾಮ ಪಂಚಾಯಿತಿಯ ಪಿಡಿಓ ಇವರಿಗೆ ಅರ್ಜಿ ಸಲ್ಲಿಸಿ ಸ್ವತ್ತಿನ ಇ-ಖಾತೆಯನ್ನು ಸದರಿಯವರ/ದೂರುದಾರರ ಹೆಸರಿಗೆ ಮಾಡುವಂತೆ

ಕೋರಿದ್ದು, ಎದುರುದಾರರು ಖಾತೆ ಮಾಡಿರುವುದಿಲ್ಲ. ಈ ಸಂಬಂಧ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಅರ್ಜಿ ಸಲ್ಲಿಸಿ ಕೈಗೊಂಡ ಕ್ರಮದ ಬಗ್ಗೆ ಮಾಹಿತಿ ನೀಡಲು ಕೋರಿದ್ದು, ಎದುರುದಾರರು ಕೈಗೊಂಡ ಕ್ರಮದ ಬಗ್ಗೆ ಸ್ಪಷ್ಟೀಕರಣ ನೀಡಲು ಅವಕಾಶ ಇರುವುದಿಲ್ಲವೆಂದು ಹಿಂಬರಹ ನೀಡಿ ಅರ್ಜಿಯನ್ನು ವಿಲೇ ಇಟ್ಟಿರುತ್ತಾರೆಂದು ಆಪಾದಿಸಿರುತ್ತಾರೆ. ಸದರಿ ಹಿಂಬರಹದ ಆಧಾರದ ಮೇಲೆ ದೊಡ್ಡಬಳ್ಳಾಪುರ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಅರ್ಜಿ ಸಲ್ಲಿಸಿ ಎದುರುದಾರರ ವಿರುದ್ಧ ಕ್ರಮ ಕೈಗೊಂಡು ಸದರಿ ಸ್ವತ್ತನ್ನು ದೂರುದಾರರ ಹೆಸರಿಗೆ ಇ-ಖಾತೆಯನ್ನು ಮಾಡಿಕೊಡಲು ಅರ್ಜಿ ಸಲ್ಲಿಸಿದ್ದರೂ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

**3. ಎದುರುದಾರರ ಆಕ್ಷೇಪಣೆ:**

ಅರ್ಜಿದಾರರು ಸಲ್ಲಿಸಿರುವ ದಾನ ಪತ್ರವನ್ನು ಪರಿಶೀಲಿಸಿದಾಗ ಶಾಕಲದೇವನಪುರ ಗ್ರಾಮ ಪಂಚಾಯಿತಿಯ ಕ್ರಮ ಸಂಖ್ಯೆ.45 ಖಾತೆ ನಂ.203 ಖಾಲಿ ನಿವೇಶನ ಶ್ರೀಮತಿ ಬಸಲಿಂಗಮ್ಮ ಕೋಂ ಲೇಟ್ ಹೊಸಳ್ಳಯ್ಯ ಇವರು ದೂರುದಾರ ಶ್ರೀ ಶಿವಕುಮಾರ್ ಎಸ್.ಹೆಚ್. ಬಿನ್ ಲೇಟ್ ಹೊಸಳ್ಳಯ್ಯ ಇವರಿಗೆ ದಿನಾಂಕ:14-8-2019ರಲ್ಲಿ ಮಾಡಿದ ದಾನ ಪತ್ರವಾಗಿರುತ್ತದೆ. ಸದರಿ ಸ್ವತ್ತು ಗ್ರಾಮ ಪಂಚಾಯಿತಿಯ ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ ಹಾಗೂ ಪಂಚತಂತ್ರದಲ್ಲಿನ ತಂತ್ರಾಂಶದಲ್ಲಿ ಹೊಸಳ್ಳಯ್ಯ ಬಿನ್ ಗವಿಯಪ್ಪ ಎಂಬವರ ಹೆಸರಿನಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ವಂಶವೃಕ್ಷದ ಪ್ರಕಾರ ಹೊಸಳ್ಳಪ್ಪ ಇವರಿಗೆ ಇಬ್ಬರು ಪತ್ನಿಯರಿದ್ದು 1ನೇ ಹೆಂಡತಿ ಪಾರ್ವತಮ್ಮ ಹಾಗೂ 2ನೇ ಹೆಂಡತಿ ಬಸವಲಿಂಗಮ್ಮ ಇದ್ದು ಪಾರ್ವತಮ್ಮ ಇವರು ಮರಣ ಹೊಂದಿರುವುದಾಗಿ ಪ್ರಮಾಣಿಕರಿಸಿರುತ್ತಾರೆಂದು ತಿಳಿಸಿರುತ್ತಾರೆ.

**ಮುಂದುವರೆದು, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ** ಗ್ರಾಮ ಪಂಚಾಯಿತಿಯ ದಾಖಲೆಯ ಪ್ರಕಾರ ಸದರಿ ಸ್ವತ್ತು ಖಾತೆ ನಂ.203 ಹೊಸಳ್ಳಪ್ಪನವರ ಹೆಸರಿನಲ್ಲಿಯೇ ಇದ್ದು ಹೊಸಳ್ಳಪ್ಪ ಇವರು ಮರಣ ಹೊಂದಿರುವುದರಿಂದ ಇವರ ಜೀವಿತಾವಧಿಯಲ್ಲಿ ಸದರಿ ಸ್ವತ್ತಿನ ಬಗ್ಗೆ ದಾನ ಪತ್ರ ಅಥವಾ ವಿಭಾಗ ಪತ್ರ ಮಾಡಿರುವ ಯಾವುದೇ ದಾಖಲಾತಿಗಳನ್ನು ಅರ್ಜಿದಾರರು ಗ್ರಾಮ ಪಂಚಾಯಿತಿಗೆ ಸಲ್ಲಿಸಿರುವುದಿಲ್ಲ. ಸದರಿ ಸ್ವತ್ತಿಗೆ ಕಾನೂನುತ್ಮಾಕವಾಗಿ ಇಬ್ಬರು ಪತ್ನಿಯರು ಸಮಾನ ಹಕ್ಕುಳ್ಳವರಾಗಿರುತ್ತಾರೆಂದು ಆದರೆ ಅರ್ಜಿದಾರರು ಸಲ್ಲಿಸಿರುವ ದಾನ ಪತ್ರದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಖಾತೆ ಇಲ್ಲದ ಬಸವಲಿಂಗಮ್ಮ ಬಿನ್ ಲೇಟ್ ಹೊಸಳ್ಳಯ್ಯ ಇವರಿಂದ ಶಿವಕುಮಾರ ಎಸ್.ಹೆಚ್. ಬಿನ್ ಲೇಟ್ ಹೊಸಳ್ಳಯ್ಯ ಇವರಿಗೆ ದಾನ ಪತ್ರ ಮಾಡಲಾಗಿರುತ್ತದೆ. ಸ್ವತ್ತಿನ ಸಂಖ್ಯೆ.45/203 ಹೊಸಳ್ಳಪ್ಪ ಬಿನ್ ಗವಿಯಪ್ಪ ಇವರ ಹೆಸರಿನಲ್ಲಿದ್ದು, ಅರ್ಜಿದಾರರ ಹೆಸರಿಗೆ ನೇರವಾಗಿ ಖಾತೆ ಮಾಡಲು ಅವಕಾಶವಿಲ್ಲದಿರುವುದರಿಂದ ಹಿಂಬರಹ ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

**4. ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗೆ ದೂರುದಾರರು ಸಲ್ಲಿಸಿರುವ ಪ್ರತ್ಯುತ್ತರ:**

ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಗೌರವಾನ್ವಿತರ ಅನುಮತಿ ಪಡೆದು ದೂರುದಾರರಿಗೆ ಕಳುಹಿಸಿ ಪ್ರತ್ಯುತ್ತರ ಸಲ್ಲಿಸಲು ಕೇಳಲಾಗಿತ್ತು. ಅದರಂತೆ ದೂರುದಾರರು ದಿನಾಂಕ:17-06-2022ರಂತೆ ಪ್ರತ್ಯುತ್ತರವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರತ್ಯುತ್ತರದಲ್ಲಿ ಶ್ಯಾಕಲದೇವನಪುರ ಗ್ರಾಮದ ಕ್ರಮ ಸಂಖ್ಯೆ.45, ಖಾತೆ ಸಂಖ್ಯೆ.203ರ ನಮೂನೆ-9 ಮತ್ತು 11ರಲ್ಲಿ ಶ್ರೀಮತಿ ಬಸಲಿಂಗಮ್ಮ ಕೋಂ ಲೇಟ್ ಹೊಸಳ್ಳಯ್ಯ ಇವರ ಹೆಸರಿನಲ್ಲಿ ಖಾತೆ ಇರುವ ದಾಖಲೆಗಳನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ದಿನಾಂಕ:10-01-2002ರಂದು ಹೊಸಳ್ಳಯ್ಯ ಇವರ 1ನೇ ಪತ್ನಿ, ಮಕ್ಕಳು ಮತ್ತು 2ನೇ ಪತ್ನಿ ಮತ್ತು ಮಕ್ಕಳು ವಿಭಾಗ ಮಾಡಿಕೊಂಡು ಪಂಚಾಯಿತಿಯ ಪಾರಿಕತ್ತನ್ನು ಮಾಡಿಕೊಂಡಿದ್ದು 2ನೇ ಪತ್ನಿ ಶ್ರೀಮತಿ ಬಸವಲಿಂಗಮ್ಮ ಇವರ ಭಾಗಕ್ಕೆ ಬಂದಿರುವ ಶ್ಯಾಕಲದೇವನಪುರ ಗ್ರಾಮದ ಖಾತೆ ಸಂಖ್ಯೆ.203ರ ನಿವೇಶನ ಈಗಾಗಲೇ ಪಂಚಾಯಿತಿಯಲ್ಲಿ ಖಾತೆಯಾಗಿರುತ್ತದೆ ಎಂದು ತಿಳಿಸಿ ದಾಖಲೆ ಲಗತ್ತಿಸಿರುವುದಾಗಿ ತಿಳಿಸಿರುತ್ತಾರೆ. ಎದುರುದಾರರು ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿ ನೀಡಿದ್ದು ಸದರಿ ನಿವೇಶನವನ್ನು ದೂರುದಾರರ ಹೆಸರಿಗೆ ಖಾತೆ ಮಾಡಲು ಆದೇಶ ನೀಡಬೇಕೆಂದು ಕೋರಿರುತ್ತಾರೆ.

**5. ಒಟ್ಟಾರೆ ಅಭಿಪ್ರಾಯ:**

ದೂರುದಾರರು ಸಲ್ಲಿಸಿರುವ ದೂರು ಅರ್ಜಿ, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ, ದೂರುದಾರರು ಸಲ್ಲಿಸಿರುವ ಪ್ರತ್ಯುತ್ತರ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬರೆದಿರುವ ಪತ್ರ, ಕಾರ್ಯನಿರ್ವಾಹಕ ಅದಿಕಾರಿಗಳು ಎದುರುದಾರರಿಗೆ ಬರೆದಿರುವ ಪತ್ರಗಳಿಂದ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1) ದೂರುದಾರರು ಸಲ್ಲಿಸಿರುವ ದಾಖಲಾತಿಗಳಾದ ನೊಂದಣಿ ದಾನ ಪತ್ರ, ನಮೂನೆ-9 ಮತ್ತು ನಮೂನೆ-11 ರ ಬಗ್ಗೆ ಯಾವುದೇ ಆಕ್ಷೇಪಣೆ ವ್ಯಕ್ತಪಡಿಸಿರುವುದಿಲ್ಲ. ಸದರಿ ದಾಖಲೆಗಳು ಸರ್ಕಾರಿ ದಾಖಲೆಗಳಾಗಿದ್ದು, ಸದರಿ ದಾಖಲೆಗಳಲ್ಲಿ ಕಾರ್ಯದರ್ಶಿ ಅಥವಾ ಎದುರುದಾರರು ನಮೂದಿಸಿದಂತಹ ಸರ್ಕಾರಿ ದಾಖಲೆಗಳಾಗಿರುತ್ತವೆ. ಸದರಿ ದಾಖಲೆಗಳಲ್ಲಿ ನಮೂದು ಮಾಡಿರುವ ಅಂಶಗಳು ಸತ್ಯದಿಂದ ಕೂಡಿರುತ್ತವೆ.

2) ನಮೂನೆ-9 ಮತ್ತು ನಮೂನೆ-11ರಲ್ಲಿ ಬಸವಲಿಂಗಮ್ಮ ಕೋಂ ಲೇಟ್ ಹೊಸಳ್ಳಯ್ಯ ಇವರ ಹೆಸರು ನಮೂದಾಗಿರುವುದರಿಂದ ಎದುರುದಾರರು ದೂರುದಾರರ ಅರ್ಜಿಯನ್ನು ಪರಿಗಣಿಸಿ ಇ-ಖಾತೆ ಮಾಡಿಕೊಡಬೇಕಾಗಿದ್ದು ಆದರೆ ಇ-ಖಾತೆ ಮಾಡಿಕೊಡದೇ ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಂಡಿರುತ್ತಾರೆ.

3) ದೂರುದಾರರು ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಕಾರ್ಯದರ್ಶಿಯವರು ಜವಾಬ್ದಾರಿಯುತ ಸ್ಥಾನದಲ್ಲಿದ್ದು ಕೈಗೊಂಡ ಕ್ರಮ ಬಗ್ಗೆ ಸ್ಪಷ್ಟೀಕರಣ ನೀಡಲು ಅವಕಾಶವಿರುವುದಿಲ್ಲವೆಂದು ಹೇಳಿ ಕರ್ತವ್ಯಲೋಪ ಎಸಗಿರುತ್ತಾರೆ.

4) ಮೇಲ್ಮನವಿ ಪ್ರಾಧಿಕಾರವಾದ ಎದುರುದಾರರು ಸಹ ಮೇಲ್ಮನವಿಯಲ್ಲಿ ಕಾರ್ಯದರ್ಶಿಯವರುಗಳು ಮಾಹಿತಿ ನೀಡದೇ ಇರುವ ಬಗ್ಗೆ ಯಾವುದೇ ಪ್ರಸ್ತಾಪ ಮಾಡದೇ ದೂರುದಾರರ ಹೆಸರಿಗೆ ಇ–ಖಾತೆ ಮಾಡಲು ಬರುವುದಿಲ್ಲವೆಂದು ಅರ್ಜಿ ವಿಲೇ ಇಡಲಾಗಿದೆ ಎಂದು ತಿಳಿಸಿರುವುದು ಸಹ ಕರ್ತವ್ಯಲೋಪವಾಗಿರುತ್ತದೆ.

5) ಎದುರುದಾರರು ದೂರುದಾರರು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸಿರುವ ದಾಖಲೆಗಳ ನೈಜ್ಯತೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಮುಂದಿನ ಕ್ರಮವನ್ನು ಕೈಗೊಳ್ಳಬೇಕಾಗಿದ್ದು ಯಾವುದೇ ಕ್ರಮವನ್ನು ಕೈಗೊಳ್ಳದೇ ಕರ್ತವ್ಯ ಲೋಪ ಎಸಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

6) ಕಾರ್ಯನಿರ್ವಾಹಕ ಅಧಿಕಾರಿಗಳು ಜನವರಿ–2022ರಲ್ಲಿ ಎದುರುದಾರರಿಗೆ ಪತ್ರ ಬರೆದು ವಹಿಸಿದ ಕ್ರಮದ ಬಗ್ಗೆ ವರದಿ ಸಲ್ಲಿಸಲು ತಿಳಿಸಿದ್ದರೂ ಸಹ ಯಾವುದೇ ವರದಿಯನ್ನು ಸಲ್ಲಿಸದೇ ಇರುವುದು ಸಹ ಕರ್ತವ್ಯಲೋಪವಾಗಿರುತ್ತದೆ.

ದೂರುದಾರರ ತಾಯಿಯವರ ಹೆಸರು ಅಂದರೆ ಶ್ರೀಮತಿ ಬಸವಲಿಂಗಮ್ಮ ಕೋಂ ಲೇಟ್ ಹೊಸಳ್ಳಯ್ಯ ಇವರ ಹೆಸರು ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ ನಮೂದಾಗಿರುವುದರಿಂದ ಹಾಗೂ ನೊಂದಾಯಿತ ದಾನ ಪತ್ರದ ಆಧಾರದ ಮೇಲೆ ಎದುರುದಾರರು ಇ–ಖಾತೆ ಮಾಡಲು ಯಾವುದೇ ಅಭ್ಯಂತರವಿಲ್ಲದಿದ್ದರೂ ಸಹ ಎದುರುದಾರರು ಇ–ಖಾತೆ ಮಾಡಲು ನಿರಾಕರಿಸಿರುವುದು ಸದರಿಯವರ ಕರ್ತವ್ಯಲೋಪವಾಗಿದ್ದು, ಸದರಿಯವರ ಮೇಲಿನ ಆಪಾದನೆಯು ಸಾಬೀತಾಗಿರುತ್ತದೆ.

ಮೇಲಿನ ಕಾರಣಗಳಿಂದ ಹಾಗೂ ಕಡತವನ್ನು ಪರಿಶೀಲಿಸಿದಾಗ ಎದುರುದಾರರಾದ ಶ್ರೀ ಗಂಗರಂಗಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹೊನ್ನಾವರ ಗ್ರಾಮ ಪಂಚಾಯಿತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, (ಎದುರುದಾರರು ಈ ಕಛೇರಿಗೆ ಸಲ್ಲಿಸಿರುವ ಸದರಿಯವರ ಸೇವಾ ವಿವರದಲ್ಲಿ ನಿವೃತ್ತಿ ದಿನಾಂಕವು 31–05–2022 ಆಗಿರುತ್ತದೆ.) ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿರುತ್ತದೆ ಹಾಗೂ ಸದರಿಯವರು ಈಗಾಗಲೇ ಸರ್ಕಾರಿ ಕರ್ತವ್ಯದಿಂದ ದಿನಾಂಕ:31–05–2022ರಂದು ನಿವೃತ್ತಿ ಹೊಂದಿರುವುದರಿಂದ ಸದರಿಯವರ ವಿರುದ್ಧ ನಿಯಮ 214(2) (ಬಿ) (ii) ಕರ್ನಾಟಕ ನಾಗರೀಕ ಸೇವಾ ನಿಯಮಗಳ ಪ್ರಕಾರ ಹಾಗೂ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ

ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಉಪಲೋಕಾಯುಕ್ತರು–2 ರವರಿಗೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

26/8/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ.



9